



# ಕಣ್ಸೆಳೆಯುವ ಕಾಷ್ಠ ಕೆತ್ತನೆ

ಅನಾದಿ ಕಾಲದಿಂದಲೂ ಚೀನಾ ಮರದ ಕೆತ್ತನೆಗೆ ಬಹಳ ಪ್ರಸಿದ್ಧಿ ಪಡೆದಿದೆ. ಅನೇಕ ಶತಮಾನಗಳಿಂದಲೂ ಉಳಿ ಹಿಡಿದ ನಿಪುಣ ಚೀನೀಯರು, ಮರದ ಬೊಡ್ಡೆಯಲ್ಲಿ ಕಲಾತ್ಮಕ ಕಲಾಕೃತಿಗಳನ್ನು ರೂಪಿಸುವುದರಲ್ಲಿ ಸಿದ್ಧಹಸ್ತರು. ಆದರೆ ಯಾವುದೇ ಕಲಾಕೃತಿ ಕೂಡ ಝೆಂಗ್ ಚುನ್‌ಹೌ ನ ಕೆತ್ತನೆಗೆ ಸರಿಸಾಟಿಯಾಗಲಾರವು ಎಂಬುದು ಹಲವರ ಅಭಿಪ್ರಾಯ.

ನೋಡಿದ ಕೂಡಲೇ ಎಂಥವರನ್ನೂ ಮಂತ್ರ ಮುಗ್ಧರನ್ನಾಗಿಸುವ ಈ ಕಲಾವಿದನ ಕೌಶಲ್ಯವನ್ನು ವರ್ಣಿಸಲು ಪದಗಳೇ ನಿಲುಕುವುದಿಲ್ಲ.

ಸುಮಾರು 1000 ವರ್ಷಗಳ ಹಿಂದಿನ 'ಅಲಾಂಗ್ ದಿ ರಿವರ್ ಡುರಿಂಗ್ ಕ್ವಿನ್‌ಮಿಂಗ್ ಫೆಸ್ಟಿವಲ್' ಎನ್ನುವ ಚಿತ್ರ ಕಲೆ ಚೀನಾದಲ್ಲಿ, ಐತಿಹಾಸಿಕವಾಗಿ ಪ್ರಾಮುಖ್ಯ ಪಡೆದಿದೆ. ಇದರಲ್ಲಿ ಆಗಿನ ಕಾಲದ ಬಡ ಹಾಗೂ ಶ್ರೀಮಂತ ವರ್ಗಗಳ ನಿತ್ಯ ಜೀವನವನ್ನು ಅತ್ಯಂತ ಸುಂದರವಾಗಿ ಚಿತ್ರಿಸಲಾಗಿದೆ.

ಚೀನಾದ ಮೊನಾಲಿಸಾ ಎಂದೇ ಖ್ಯಾತಿ ಪಡೆದ ಇದರ ಪ್ರತಿಕೃತಿಯನ್ನು ಝೆಂಗ್ ಚುನ್‌ಹೌ, 12 ಮೀಟರ್ ಉದ್ದನೆಯ ಮರದ ದಿಮ್ಮಿಯಲ್ಲಿ ಅತ್ಯದ್ಭುತವಾಗಿ ಕೆತ್ತಿದ್ದಾನೆ. ಮನೆ, ಮರ, ಸೇತುವೆ, ದೋಣಿ ಮುಂತಾದವುಗಳನ್ನೆಲ್ಲಾ ಅತ್ಯಂತ ನಾಜೂಕಾಗಿ ಕೆತ್ತನೆ ಮಾಡಿ ಮುಗಿಸಲು ಝೆಂಗ್‌ನಿಗೆ ನಾಲ್ಕು ವರ್ಷಗಳು ಬೇಕಾಯಿತು. ಈ ಕಲಾಕೃತಿಯು 37 ಅಡಿ ಉದ್ದ,10 ಅಡಿ ಎತ್ತರ ಹಾಗೂ 6 ಅಡಿಗಳಷ್ಟು ಅಗಲವಾಗಿದೆ ಮತ್ತು ಅತೀ ಉದ್ದನೆಯ ಮರ ಕೆತ್ತನೆ ಎಂಬ ಗಿನ್ನೆಸ್ ವಿಶ್ವದಾಖಲೆಯ ಮನ್ನಣೆಯನ್ನೂ ಗಳಿಸಿದೆ.

■ ವಿದ್ಯಾ ವಿ. ಹಾಲಭಾವಿ

